## ನುಡಿ




ಈ ಕೀಲಿಮಣೆ ವಿನ್ಯಾಸ ಕರ್ನಾಟಕ ಸರ್ಕಾರ ನಿಗದಿಪಡಿಸಿರುವ ಶಿಷ್ಟತೆಗೆ ಅನುಗುಣವಾಗಿದೆ. ಕೀಲಿಮಣೆವಿನ್ಯಾಸ
ಕನ್ನಡ ಗಣಕ ಕೀಲಿಮಣೆ ವಿನ್ಯಾಸ ಎಂದರೆ, ಗಣಕ ಕೀಲಿಮಣೆಯ ಯಾವ ಕೀಲಿಗೆ ಯಾವ ಕನ್ನಡ ಕ್ಷರವನ್ನು ಗೊತ್ತುಮಾಡುವುದು ಎಂಬುದೇ ಆಗಿದೆ.

ಉದಾಹರಣೆಗೆ ‘ಂ’ ಅಕ್ಷರವನ್ನು ಗುರುತಿಸಿರುವ ಕೀಲಿಯನ್ನು ಒತ್ತಿ ‘ಅ’ ಅಕ್ಷರವನ್ನು ಪಡೆಯುವಂತೆ ತಂತ್ರಾಂಶದ ಮೂಲಕ ಗಣಕಕ್ಕೆ ನಿರ್ದೇಶನ ನೀಡಬಹುದು. ಅಲ್ಲದೆ ನಮಗೆ ಬೇಕಾದ ಅಕ್ಷರವನ್ನು ನಮಗೆ ಇಷ್ಟವಾದ ಕೀಲಿಯಿಂದ ಪಡೆಯುವಂತೆ ತಂತ್ರಾಂಶವನ್ನು ಸಿದ್ಧಪಡಿಸಬಹುದು. ಆದರೆ ಈ ರೀತಿ ಬಳಕೆದಾರರಿಗೆ ಬೇಕೆನಿಸಿದ ಬದಲಾವಣೆಗಳನ್ನು ಮಾಡಿಕೊಳ್ಳುವ ಸೌಲಭ್ಯವನ್ನು ನೀಡಿದಲ್ಲಿ ಗೊಂದಲಗಳಾಗುತ್ತವೆ. ಆದ್ದರಿಂದಲೇ ಇಂಗ್ಲಿಷ್‌ಗಾಗಿ ನಿರ್ದಿಷ್ಟಪಡಿಸಿರುವ ವ್ಯವಸ್ಥೆಯನ್ನು ಯಾರೂ ಬದಲಾಯಿಸುವುದಿಲ್ಲ. ಕನ್ನಡಕ್ಕೂ ಇಂತಹ ಶಿಷ್ಟತೆಅಗತ್ಯವಾಗಿದೆ.

**ನುಡಿಯ ಬಳಕೆ – ನುಡಿ ಆರಂಭ**

ನುಡಿ’ಯ ಅನುಸ್ಥಾಪನೆ ಆದ ಕೂಡಲೆ ಪ್ರದರ್ಶಕತೆರೆ (ಮಾನಿಟರ್) ಮೇಲೆ Nudi ೪.೦ ಎಂಬ ಲಾಂಛನವು (Icon) ಮೂಡಿರುತ್ತದೆ.

‘ನುಡಿ’ಯನ್ನು ಎಂಎಸ್ ವರ್ಡ್ ಅಥವಾ ಇತರ ತಂತ್ರಾಂಶಗಳಲ್ಲಿ ಬಳಸಲು `Nudi 4.0' ಮೇಲೆ ಜೋಡಿ ಕ್ಲಿಕ್ ಮಾಡಿ.

‘ನುಡಿ’ ಲಾಂಛನವು ಪ್ರದರ್ಶಕದ ಕೆಳ ಅಂಚಿನ ಬಲ ಮೂಲೆಯಲ್ಲಿ ಕಾಣಿಸಿಕೊಳ್ಳುತ್ತದೆ

‘ನುಡಿ ಪದಸಂಸ್ಕಾರಕ’ ಬಳಸಲು ಪ್ರದರ್ಶಕದ ಕೆಳ ಅಂಚಿನ ಬಲಮೂಲೆಯಲ್ಲಿ ಕಾಣಿಸಿಕೊಳ್ಳುತ್ತಿರುವ ‘ನುಡಿ’ ಲಾಂಛನದ ಒಮ್ಮೆ ಕ್ಲಿಕ್ಕಿಸಿ.

‘ನುಡಿ’ ಬಳಕೆಗೆ ಸಿದ್ಧವಾದಾಗ ಕೀಲಿಮಣೆಯ ಮೇಲಿನ SCROLL LOCK ಸಂಕೇತ ದೀಪ ಹೊತ್ತಿರುತ್ತದೆ. ಇದನ್ನು ಹೊತ್ತಿಸಲು/ಆರಿಸಲು SCROLL LOCK ಕೀಲಿಯನ್ನು ಒತ್ತಿರಿ. ನುಡಿಯ ೪.೦ ನೆಯ ಆವೃತ್ತಿಯಲ್ಲಿ SCROLL LOCK ಕೀ ಬದಲು F12 ಕೀಯನ್ನು ಬಳಸಬಹುದು.

ಈಗ ನುಡಿ ತಂತ್ರಾಂಶವು ಬಳಕೆಗೆ ಸಿದ್ಧ.

| ಕನ್ನಡದಲ್ಲಿ ಗುಣಿತಾಕ್ಷರಗಳು ಮತ್ತು ಸಂಯುಕ್ತಾಕ್ಷರಗಳನ್ನು ಪಡೆಯುವ ಉದಾಹರಣೆಗಳು | | | | | | | |
|---|---|---|---|---|---|---|---|
| ಅ | a | ಖೆ | Ke | ಙ | Z | ಛೆ | Ce |
| ಆ | A | ಖೇ | KE | ಙಾ | ZA | ಛೇ | CE |
| ಇ | i | ಖೈ | KY | ಙಿ | Zi | ಛೈ | CY |
| ಈ | I | ಖೊ | Ko | ಙೀ | ZI | ಛೊ | Co |
| ಉ | u | ಖೋ | KO | ಙು | Zu | ಛೋ | CO |
| ಊ | U | ಖೌ | KV | ಙೂ | ZU | ಛೌ | CV |
| ಋ | R | ಖಂ | KM | ಙೃ | ZR | ಛಂ | CM |
| ೠ | RX | ಖಃ | KH | ಙೄ | ZRX | ಛಃ | CH |
| ಎ | e | ಗ | g | ಙೆ | Ze | ಜ | j |
| ಏ | E | ಗಾ | gA | ಙೇ | ZE | ಜಾ | jA |
| ಐ | Y | ಗಿ | gi | ಙೈ | ZY | ಜಿ | ji |
| ಒ | o | ಗೀ | gI | ಙೊ | Zo | ಜೀ | jI |
| ಓ | O | ಗು | gu | ಙೋ | ZO | ಜು | ju |
| ಔ | V | ಗೂ | gU | ಙೌ | ZV | ಜೂ | jU |
| ಅಂ | aM | ಗೃ | gR | ಙಂ | ZM | ಜೃ | jR |
| ಅಃ | aH | ಗೄ | gRX | ಙಃ | ZH | ಜೄ | jRX |
| ಕ | k | ಗೆ | ge | ಚ | c | ಜೆ | je |
| ಕಾ | kA | ಗೇ | gE | ಚಾ | cA | ಜೇ | jE |
| ಕಿ | ki | ಗೈ | gY | ಚಿ | ci | ಜೈ | jY |
| ಕೀ | kI | ಗೊ | go | ಚೀ | cI | ಜೊ | jo |
| ಕು | ku | ಗೋ | gO | ಚು | cu | ಜೋ | jO |
| ಕೂ | kU | ಗೌ | gV | ಚೂ | cU | ಜೌ | jV |
| ಕೃ | kR | ಗಂ | gM | ಚೃ | cR | ಜಂ | jM |

| | | | | | | | |
|---|---|---|---|---|---|---|---|
| ಕೄ | kRX | ಗಃ | gH | ಚೄ | cRX | ಜಃ | jH |
| ಕೆ | ke | ಘ | G | ಚೆ | ce | ಝ | z |
| ಕೇ | kE | ಘಾ | GA | ಚೇ | cE | ಝಾ | zA |
| ಕೈ | kY | ಘಿ | Gi | ಚೈ | cY | ಝಿ | zi |
| ಕೊ | ko | ಘೀ | GI | ಚೊ | co | ಝೀ | zI |
| ಕೋ | kO | ಘು | Gu | ಚೋ | cO | ಝು | zu |
| ಕೌ | kV | ಘೂ | GU | ಚೌ | cV | ಝೂ | zU |
| ಕಂ | kM | ಘೃ | GR | ಚಂ | cM | ಝೃ | zR |
| ಕಃ | kH | ಘೄ | GRX | ಚಃ | cH | ಝೄ | zRX |
| ಖ | K | ಘೆ | Ge | ಛ | C | ಝೆ | ze |
| ಖಾ | KA | ಘೇ | GE | ಛಾ | CA | ಝೇ | zE |
| ಖಿ | Ki | ಘೈ | GY | ಛಿ | Ci | ಝೈ | zY |
| ಖೀ | KI | ಘೊ | Go | ಛೀ | CI | ಝೊ | zo |
| ಖು | Ku | ಘೋ | GO | ಛು | Cu | ಝೋ | zO |
| ಖೂ | KU | ಘೌ | GV | ಛೂ | CU | ಝೌ | zV |
| ಖೃ | KR | ಘಂ | GM | ಛೃ | CR | ಝಂ | zM |
| ಖೄ | KRX | ಘಃ | GH | ಛೄ | CRX | ಝಃ | zH |
| ಟ | q | ಡೊ | wo | ತೃ | tR | ಧಾ | DA |
| ಟಾ | qA | ಡೋ | wO | ತೄ | tRX | ಧಿ | Di |
| ಟಿ | qi | ಡೌ | wV | ತೆ | te | ಧೀ | DI |
| ಟೀ | qI | ಡಂ | wM | ತೇ | tE | ಧು | Du |
| ಟು | qu | ಡಃ | wH | ತೈ | tY | ಧೂ | DU |
| ಟೂ | qU | ಢ | W | ತೊ | to | ಧೃ | DR |
| ಟೃ | qR | ಢಾ | WA | ತೋ | tO | ಧೄ | DRX |
| ಟೄ | qRX | ಢಿ | Wi | ತೌ | tV | ಧೆ | De |
| ಟೆ | qe | ಢೀ | WI | ತಂ | tM | ಧೇ | DE |
| ಟೇ | qE | ಢು | Wu | ತಃ | tH | ಧೈ | DY |
| ಟೈ | qY | ಢೂ | WU | ಥ | T | ಧೊ | Do |
| ಟೊ | qo | ಢೃ | WR | ಥಾ | TA | ಧೋ | DO |
| ಟೋ | qO | ಢೄ | WRX | ಥಿ | Ti | ಧೌ | DV |
| ಟೌ | qV | ಢೆ | We | ಥೀ | TI | ಧಂ | DM |
| ಟಂ | qM | ಢೇ | WE | ಥು | Tu | ಧಃ | DH |
| ಟಃ | qH | ಢೈ | WY | ಥೂ | TU | ನ | n |
| ಠ | Q | ಢೊ | Wo | ಥೃ | TR | ನಾ | nA |
| ಠಾ | QA | ಢೋ | WO | ಥೄ | TRX | ನಿ | ni |
| ಠಿ | Qi | ಢೌ | WV | ಥೆ | Te | ನೀ | nI |
| ಠೀ | QI | ಢಂ | WM | ಥೇ | TE | ನು | nu |
| ಠು | Qu | ಢಃ | WH | ಥೈ | TY | ನೂ | nU |
| ಠೂ | QU | ಣ | N | ಥೊ | To | ನೃ | nR |

| | | | | | | | |
|---|---|---|---|---|---|---|---|
| ಠೃ | QR | ಣಾ | NA | ಥೋ | TO | ನೄ | nRX |
| ಠೄ | QRX | ಣಿ | Ni | ಥೌ | TV | ನೆ | ne |
| ಠೆ | Qe | ಣೀ | NI | ಥಂ | TM | ನೇ | nE |
| ಠೇ | QE | ಣು | Nu | ಥಃ | TH | ನೈ | nY |
| ಠೈ | QY | ಣೂ | NU | ದ | d | ನೊ | no |
| ಠೊ | Qo | ಣೃ | NR | ದಾ | dA | ನೋ | nO |
| ಠೋ | QO | ಣೄ | NRX | ದಿ | di | ನೌ | nV |
| ಠೌ | QV | ಣೆ | Ne | ದೀ | dI | ನಂ | nM |
| ಠಂ | QM | ಣೇ | NE | ದು | du | ನಃ | nH |
| ಠಃ | QH | ಣೈ | NY | ದೂ | dU | ಪ | p |
| ಡ | w | ಣೊ | No | ದೃ | dR | ಪಾ | pA |
| ಡಾ | wA | ಣೋ | NO | ದೄ | dRX | ಪಿ | pi |
| ಡಿ | wi | ಣೌ | NV | ದೆ | de | ಪೀ | pI |
| ಡೀ | wI | ಣಂ | NM | ದೇ | dE | ಪು | pu |
| ಡು | wu | ಣಃ | NH | ದೈ | dY | ಪೂ | pU |
| ಡೂ | wU | ತ | t | ದೊ | do | ಪೃ | pR |
| ಡೃ | wR | ತಾ | tA | ದೋ | dO | ಪೄ | pRX |
| ಡೄ | wRX | ತಿ | ti | ದೌ | dV | ಪೆ | pe |
| ಡೆ | we | ತೀ | tI | ದಂ | dM | ಪೇ | pE |
| ಡೇ | wE | ತು | tu | ದಃ | dH | ಪೈ | pY |
| ಡೈ | wY | ತೂ | tU | ಧ | D | ಪೊ | po |
| ಪೋ | pO | ಭೄ | BRX | ರಿ | ri | ವೌ | vV |
| ಪೌ | pV | ಭೆ | Be | ರೀ | rI | ವಂ | vM |
| ಪಂ | pM | ಭೇ | BE | ರು | ru | ವಃ | vH |
| ಪಃ | pH | ಭೈ | BY | ರೂ | rU | ಶ | S |
| ಫ | P | ಭೊ | Bo | ರೃ | rR | ಶಾ | SA |
| ಫಾ | PA | ಭೋ | BO | ರೄ | rRX | ಶಿ | Si |
| ಫಿ | Pi | ಭೌ | BV | ರೆ | re | ಶೀ | SI |
| ಫೀ | PI | ಭಂ | BM | ರೇ | rE | ಶು | Su |
| ಫು | Pu | ಭಃ | BH | ರೈ | rY | ಶೂ | SU |
| ಫೂ | PU | ಮ | m | ರೊ | ro | ಶೃ | SR |
| ಫೃ | PR | ಮಾ | mA | ರೋ | rO | ಶೄ | SRX |
| ಫೄ | PRX | ಮಿ | mi | ರೌ | rV | ಶೆ | Se |
| ಫೆ | Pe | ಮೀ | mI | ರಂ | rM | ಶೇ | SE |
| ಫೇ | PE | ಮು | mu | ರಃ | rH | ಶೈ | SY |
| ಫೈ | PY | ಮೂ | mU | ಲ | l | ಶೊ | So |
| ಫೊ | Po | ಮೃ | mR | ಲಾ | lA | ಶೋ | SO |
| ಫೋ | PO | ಮೄ | mRX | ಲಿ | li | ಶೌ | SV |
| ಫೌ | PV | ಮೆ | me | ಲೀ | lI | ಶಂ | SM |

| | | | | | | | |
|---|---|---|---|---|---|---|---|
| ಫಂ | PM | ಮೇ | mE | ಲು | lu | ಶಃ | SH |
| ಫಃ | PH | ಮೈ | mY | ಲೂ | lU | ಷ | x |
| ಬ | b | ಮೊ | mo | ಲೃ | lR | ಷಾ | xA |
| ಬಾ | bA | ಮೋ | mO | ಲೄ | lRX | ಷಿ | xi |
| ಬಿ | bi | ಮೌ | mV | ಲೆ | le | ಷೀ | xI |
| ಬೀ | bI | ಮಂ | mM | ಲೇ | lE | ಷು | xu |
| ಬು | bu | ಮಃ | mH | ಲೈ | lY | ಷೂ | xU |
| ಬೂ | bU | ಯ | y | ಲೊ | lo | ಷೃ | xR |
| ಬೃ | bR | ಯಾ | yA | ಲೋ | lO | ಷೄ | xRX |
| ಬೄ | bRX | ಯಿ | yi | ಲೌ | lV | ಷೆ | xe |
| ಬೆ | be | ಯೀ | yI | ಲಂ | lM | ಷೇ | xE |
| ಬೇ | bE | ಯು | yu | ಲಃ | lH | ಷೈ | xY |
| ಬೈ | bY | ಯೂ | yU | ವ | v | ಷೊ | xo |
| ಬೊ | bo | ಯೃ | yR | ವಾ | vA | ಷೋ | xO |
| ಬೋ | bO | ಯೄ | yRX | ವಿ | vi | ಷೌ | xV |
| ಬೌ | bV | ಯೆ | ye | ವೀ | vI | ಷಂ | xM |
| ಬಂ | bM | ಯೇ | yE | ವು | vu | ಷಃ | xH |
| ಬಃ | bH | ಯೈ | yY | ವೂ | vU | ಸ | s |
| ಭ | B | ಯೊ | yo | ವೃ | vR | ಸಾ | sA |
| ಭಾ | BA | ಯೋ | yO | ವೄ | vRX | ಸಿ | si |
| ಭಿ | Bi | ಯೌ | yV | ವೆ | ve | ಸೀ | sI |
| ಭೀ | BI | ಯಂ | yM | ವೇ | vE | ಸು | su |
| ಭು | Bu | ಯಃ | yH | ವೈ | vY | ಸೂ | sU |
| ಭೂ | BU | ರ | r | ವೊ | vo | ಸೃ | sR |
| ಭೃ | BR | ರಾ | rA | ವೋ | vO | ಸೄ | sRX |
| ಸೆ | se | ಳೇ | LE | ೞಂ | LXM | ಸ್ತೃ | sfpR |
| ಸೇ | sE | ಳೈ | LY | ೞಃ | LXH | ಷ್ಕ್ರಿ | xfkfri |
| ಸೈ | sY | ಳೊ | Lo | ಸಂಯುಕ್ತಾಕ್ಷರಗಳ ಉದಾಹರಣೆಗಳು | | ಕ್ತ್ಯ | kftfy |
| ಸೊ | so | ಳೋ | LO | | | ಷ್ಟ್ಯ | xfqfy |
| ಸೋ | sO | ಳೌ | LV | ಕ್ಕ | kfk | ಕ್ತ್ರ | kftfr |
| ಸೌ | sV | ಳಂ | LM | ಖ್ಖ | KfK | ಪ್ರೋ | pfrO |
| ಸಂ | sM | ಳಃ | LH | ಗ್ಗ | gfg | ತ್ರ್ಯೋ | tfrfyO |
| ಸಃ | sH | ಱ | rX | ಘ್ಗ | Gfg | ತ್ರ್ಯಂ | tfrfyM |
| ಹ | h | ಱಾ | rXA | ಜ್ಜ | ZfZ | ವಿಶೇಷ ಅಕ್ಷರಗಳು | |
| ಹಾ | hA | ಱಿ | rXi | ಜ್ಞ | jfz | ಜ಼ | jX |
| ಹಿ | hi | ಱೀ | rXI | ಡ್ವ | wfv | ಫ಼ | PX |
| ಹೀ | hI | ಱು | rXu | ಬ್ಯಾ | bfyA | ಖ಼. | KX |
| ಹು | hu | ಱೂ | rXU | ಭ್ರ | Bfr | ಅವಗ್ರಹ ಚಿಹ್ನೆ | |
| ಹೂ | hU | ಱೃ | rXR | ಮ್ಯ | mfy | ಽ | aX |

| | | | | | | | |
|---|---|---|---|---|---|---|---|
| ಹೃ | hR | ಱೄ | rXRX | ಮ್ಯಿ | mfyi | | |
| ಹೄ | hRX | ಱೆ | rXe | ಷ್ಟೀ | xfqfrI | | |
| ಹೆ | he | ಱೇ | rXE | ಣ್ಣು | NfNu | | |
| ಹೇ | hE | ಱೈ | rXY | ದ್ಧೂ | dfDU | | |
| ಹೈ | hY | ಱೊ | rXo | ದ್ವಿ | dfve | | |
| ಹೊ | ho | ಱೋ | rXO | ಸ್ಟೇ | sfqE | | |
| ಹೋ | hO | ಱೌ | rXV | ದ್ವೈ | dfvY | | |
| ಹೌ | hV | ಱಂ | rXM | ತ್ಯೊ | tfyo | | |
| ಹಂ | hM | ಱಃ | rXH | ಷ್ಣೋ | xfNO | | |
| ಹಃ | hH | ೞ | LX | ಸ್ಕೌ | sfkV | | |
| ಳ | L | ೞಾ | LXA | ಶ್ವಂ | SfvM | | |
| ಳಾ | LA | ೞೃ | LXR | ಸ್ವಃ | sfvH | | |
| ಳಿ | Li | ೞೄ | LXRX | ರ್ತ್ಸ | tfsF | | |
| ಳೀ | LI | ೞೆ | LXe | ಷ್ಟ್ರ | xfqfr | | |
| ಳು | Lu | ೞೇ | LXE | ತ್ಸ್ಯೋ | tfsfyO | | |
| ಳೂ | LU | ೞೈ | LXY | ನ್ಣ | nN | | |
| ಳೃ | LR | ೞೊ | LXo | ಕ್ಷ್ಮೈ | kfxfmY | | |
| ಳೄ | LRX | ೞೋ | LXO | ಷ್ಟ್ರೈ | xfqfrY | | |
| ಳೆ | Le | ೞೌ | LXV | ಸ್ಪೃ | sfpR | | |

| ಕನ್ನಡದ ಸಾಮಾನ್ಯ ಬರವಣಿಗೆಯಂತೆ ರ ಅಕ್ಷರದಿಂದ ಮೊದಲಾಗುವ ಗುಣಿತಾಕ್ಷರಗಳು | | | | ಅರ್ಕಾವೊತ್ತು ಚಿಹ್ನೆಯನ್ನು ಬಳಸಿಕೊಂಡಿರುವಂತೆ ರ ಅಕ್ಷರದಿಂದ ಮೊದಲಾಗುವ ಗುಣಿತಾಕ್ಷರಗಳು | | | |
|---|---|---|---|---|---|---|---|
| ರ ಅಕ್ಷರಕ್ಕೆ ಇತರ ವ್ಯಂಜನಗಳ ಒತ್ತುಗಳು | | ಉದಾಹರಣೆಗಳು | | ಇತರ ವ್ಯಂಜನಗಳಿಗೆ ಅರ್ಕಾವೊತ್ತಿನ ಚಿಹ್ನೆಯ ಬಳಕೆ | | ಉದಾಹರಣೆಗಳು | |
| ರ್‍ಕ | rfk | ಅರ್‍ಕ | arfk | ರ್ಕ | kF | ಅರ್ಕ | akF |
| ರ್‍ಖ | rfK | ಮೂರ್‍ಖ | mUrfK | ರಖ | KF | ಮೂರ್ಖ | mUKF |
| ರ್‍ಗ | rfg | ಮಾರ್‍ಗ | mArfg | ರ್ಗ | gF | ಮಾರ್ಗ | mAgF |
| ರ್‍ಘ | rfG | ಭರ್‍ಘ | BrfG | ರ್ಘ | GF | ಭರ್ಘ | BGF |
| ರ್‍ಙ | rfZ | | | ರ್ಙ | ZF | | |
| ರ್‍ಚ | rfc | ಅರ್‍ಚನೆ | arfcne | ರ್ಚ | cF | ಅರ್ಚನೆ | acFne |
| ರ್‍ಛ | rfC | ಮೂರ್‍ಛೆ | mUrCe | ರ್ಛ | CF | ಮೂರ್ಛೆ | mUCeF |
| ರ್‍ಜ | rfj | ಮಾರ್‍ಜ | mArfj | ರ್ಜ | jF | ಮಾರ್ಜ | mAjF |
| ರ್‍ಝ | rfJ | | | ರ್ಝ | JF | | |
| ರ್‍ಞ | rfz | | | ರ್ಞ | zF | | |

| | | | | | | | |
|---|---|---|---|---|---|---|---|
| ರ್ಟ | rfq | ಚಾರ್ಟ್ | cArfqf | ರ‍್ಟ | qF | ಚಾರ‍್ಟ್ | cAqfF |
| ರ್ಠ | rfQ | | | ರ‍್ಠ | QF | | |
| ರ್ಡ | rfw | ಬರ್ಡು | brfdu | ರ‍್ಡ | wF | ಬರ‍್ಡು | bwuF |
| ರ್ಢ | rfW | | | ರ‍್ಢ | WF | | |
| ರ್ಣ | rfN | ಕರ್ಣ | krfN | ರ‍್ಣ | NF | ಕರ‍್ಣ | kNF |
| ರ್ತ | rft | ಕರ್ತಾರ | krftAr | ರ‍್ತ | tF | ಕರ‍್ತಾರ | ktAFr |
| ರ್ಥ | rfT | ಅರ್ಥ | arfT | ರ‍್ಥ | TF | ಅರ‍್ಥ | aTF |
| ರ್ದ | rfd | ಜರ್ದಾ | jrfdA | ರ‍್ದ | dF | ಜರ‍್ದಾ | jdAF |
| ರ್ಧ | rfD | ಅರ್ಧ | arfD | ರ‍್ಧ | DF | ಅರ‍್ಧ | aDF |
| ರ್ನ | rfn | ಕರ್ನಾಟಕ | krfnAqk | ರ‍್ನ | nF | ಕರ‍್ನಾಟಕ | knAFqk |
| ರ್ಪ | rfp | ಅರ್ಪಣೆ | arfpNe | ರ‍್ಪ | pF | ಅರ‍್ಪಣೆ | apFNe |
| ರ್ಫ | rfP | ಅರ್ಫ | arfP | ರ‍್ಫ | PF | ಅರ‍್ಫ | aGF |
| ರ್ಬ | rfb | ಜರ್ಬು | jrfbu | ರ‍್ಬ | bF | ಜರ‍್ಬು | jbuF |
| ರ್ಭ | rfB | | | ರ‍್ಭ | BF | | |
| ರ್ಮ | rfm | ಕರ್ಮ | krfm | ರ‍್ಮ | mF | ಕರ‍್ಮ | kmF |
| ರ್ಯ | rfy | ಆರ್ಯ | Arfy | ರ‍್ಯ | yF | ಆರ‍್ಯ | AyF |
| ರ್ರ | rfr | ಸರ್ರನೆ | srfrne | ರ‍್ರ | rF | | |
| ರ್ಲ | rfl | ಪೇರ್ಲ | pErfl | ರ‍್ಲ | lF | ಪೇರ‍್ಲ | pElF |
| ರ್ವ | rfv | ಗರ್ವ | grfv | ರ‍್ವ | vF | ಗರ‍್ವ | gvF |
| ರ್ಶ | rfS | ವರ್ಶ | vrfS | ರ‍್ಶ | SF | ವರ‍್ಯ | vyF |
| ರ್ಷ | rfx | ಹರ್ಷ | hrfx | ರ‍್ಷ | xF | ಹರ‍್ಷ | hxF |
| ರ್ಸ | rfs | ಪರ್ಸು | prfsu | ರ‍್ಸ | sF | ಪರ‍್ಸು | psuF |
| ರ್ಹ | rfh | ಅರ್ಹ | arfh | ರ‍್ಹ | hF | ಅರ‍್ಹ | ahF |
| ರ್ಳ | rfL | | | ರ‍್ಳ | LF | | |

ಮೇಲ್ಕಂಡ ಎರಡು ರೂಪಗಳೂ ಕನ್ನಡದಲ್ಲಿ ಬಳಕೆಯಲ್ಲಿವೆ.

| ಮತ್ತಷ್ಟು ಉದಾಹರಣೆಗಳು | | ಅರ್ಕಾವೊತ್ತಿನೊಡನೆ ಮತ್ತಷ್ಟು ಉದಾಹರಣೆಗಳು | |
|---|---|---|---|
| ಅರ್ಚನೆ | arfcne | ಅರ‍್ಚನೆ | acFne |
| ಮೂರ್ಛೆ | mUrfCe | ಮೂರ‍್ಛೆ | mUCeF |
| ಭರ್ಜಿ | Brfji | ಭರ‍್ಜಿ | BjiF |
| ಪಾರ್ಟಿ | pArfqi | ಪಾರ‍್ಟಿ | pAqiF |
| ಬರ್ಡು | brfwu | ಬರ‍್ಡು | bwuF |
| ಸರ್ಪ | srfp | ಸರ‍್ಪ | spF |
| ಕರ್ರನೆ | krfrne | | |
| ಸರ್ವ | srfv | ಸರ‍್ವ | svF |
| ನಿರ್ದೇಶ | nirfdES | ನಿರ‍್ದೇಶ | nidEFS |
| ಅರ್ಕ | arfk | ಅರ‍್ಕ | akF |

| | | | |
|---|---|---|---|
| ದುರ್ಗೇಶ್ವರಿ | durfgESfvri | ದುರ್ಗೇಶ್ವರಿ | dugEFSfvri |
| ಹರ್ಷೋದ್ಗಾರ | hrfxOdfgAr | ಹರ್ಷೋದ್ಗಾರ | hxOFdfgAr |

ಕನ್ನಡಕ್ಕೂ ೨೬ ಕೀಲಿಗಳು

ಗಣಕಗಳ ಜೊತೆ ಇರುವ ಕೀಲಿಮಣೆಗಳಲ್ಲಿ ಇಂಗ್ಲಿಷ್ ಅಕ್ಷರಗಳಿಗೆ ಇರುವ 26 ಕೀಲಿಗಳನ್ನು ಮಾತ್ರವೇ ಕನ್ನಡಕ್ಕೂ ಬಳಸಿಕೊಂಡರೆ ಅದು ಬಳಕೆಗೆ ಸುಲಭವಾಗುತ್ತದೆ.

ಕನ್ನಡ ಭಾಷೆಯಲ್ಲಿ ಕೆಳಕಂಡ 51 ಅಕ್ಷರಗಳು/ಚಿಹ್ನೆಗಳು ಈಗ ಬಳಕೆಯಲ್ಲಿವೆ. 13 ಸ್ವರಗಳು (ಅ, ಆ, ಇ, ಈ, ಉ, ಊ, ಋ, ಎ, ಏ, ಐ, ಒ, ಓ, ಔ)

'ಅ' ಸ್ವರ ಸಹಿತವಾದ 25 ವರ್ಗೀಯ ವ್ಯಂಜನಗಳು (ಕ, ಖ, ಗ, ಘ, ಙ, ಚ, ಛ, ಜ, ಝ, ಞ, ಟ, ಠ, ಡ, ಢ, ಣ, ತ, ಥ, ದ, ಧ, ನ, ಪ, ಫ, ಬ, ಭ, ಮ)

'ಅ' ಸ್ವರ ಸಹಿತವಾದ 9 ಅವರ್ಗೀಯ ವ್ಯಂಜನಗಳು (ಯ, ರ, ಲ, ವ, ಶ, ಷ, ಸ, ಹ, ಳ)

ಅನುಸ್ವಾರ(ಂ), ವಿಸರ್ಗ(ಃ), ಅರ್ಕಾವೊತ್ತು (೯) ಮತ್ತು ಮೂಲವ್ಯಂಜನವನ್ನು ಮೂಡಿಸಲು ಬಳಸುವ ಅರ್ಧಾಕ್ಷರ ಚಿಹ್ನೆ (್, ಹಲಂತ್) – ಒಟ್ಟು 4 ಚಿಹ್ನೆಗಳು –– ಇವೆಲ್ಲವೂ ಸೇರಿ 51 ಅಕ್ಷರ/ಚಿಹ್ನೆಗಳಾಗುತ್ತವೆ.

ಇಂಗ್ಲಿಷ್‌ಗಾಗಿ ಬಳಸುವ 26 ಕೀಲಿಗಳು [ಸಹಜ(ನಾರ್ಮಲ್) ಮತ್ತು ಒತ್ತು(ಶಿಫ್ಟ್) ಒಡನೆ 52 ಸಾಧ್ಯತೆಗಳು] ಮಾತ್ರವೇ ಕನ್ನಡಕ್ಕೂ ಸಾಕಾಗುತ್ತದೆ. ಚಿತ್ರದಲ್ಲಿ ಕಾಣಿಸಿರುವಂತೆ ಸಾಮಾನ್ಯವಾಗಿ ಕನ್ನಡದ ಅಕ್ಷರಗಳಿಗೆ ಅದೇ ಧ್ವನಿಯುಳ್ಳ ಇಂಗ್ಲೀಷ ಅಕ್ಷರದ ಕೀಲಿಯನ್ನೇ ನಿಗದಿಗೊಳಿಸಿದ್ದಾರೆ. ಉದಾ: ಞ : ಕ;, : ಸ ಇತ್ಯಾದಿ.

ಮೂಲವ್ಯಂಜನ ಬೇಕಾದಾಗ ತೆರೆಯ ಮೇಲೆ ವ್ಯಂಜನಾಕ್ಷರ ಮೂಡಿದ ನಂತರ ಚಿನ್ಹೆಯ ಕೀಲಿಯನ್ನು ಒತ್ತಿ ಅದನ್ನು ಮೂಲ ವ್ಯಂಜನವನ್ನಾಗಿ ಪರಿವರ್ತಿಸಬಹುದು.

ಗುಣಿತಾಕ್ಷರಗಳು ಮತ್ತು ಸಂಯಕ್ತಾಕ್ಷರಗಳನ್ನೂ ಈ ವಿನ್ಯಾಸದಿಂದಲೇ ಪಡೆಯಬಹುದು.

ಪದಸಂಸ್ಕಾರಕದ ಬಳಕೆ

ಈ ಪದ ಸಂಸ್ಕಾರಕವು WORDPAD ಪದ ಸಂಸ್ಕಾರಕವನ್ನು ಬಹುವಾಗಿ ಹೋಲುತ್ತದೆ.

ಈ ಸಂಪಾದಕವನ್ನು ಬಳಸಿ ನಾವು ಯಾವ ರೀತಿಯ ಕಡತವನ್ನು ಸಿದ್ಧಪಡಿಸುತ್ತೇವೆ ಎಂಬುದನ್ನು ನಿರ್ಧರಿಸಲುಸಹಾಯಕವಾದ ಆಯ್ಕೆ ಕಿಟಕಿ ತೆರೆಯ ಮೇಲೆ ಮೂಡುತ್ತದೆ. ಇದರಲ್ಲಿ ನಾಲ್ಕು ಆಯ್ಕೆಗಳಿರುತ್ತವೆ.

- ನುಡಿ ಹೊಸ ದಸ್ತಾವೇಜು (Nudi New Document)
- ಎಚ್.ಟಿ.ಎಂ.ಎಲ್ ಕಡತ (HTML File)
- ಇಸ್ಕಿ ಪಠ್ಯ ಕಡತ (ISCII Text File)

ಅಕ್ಷರ ಭಾಗ ಪಠ್ಯ ಕಡತ (Glyph Text File)

ಇವುಗಳಲ್ಲಿ ನಿಮಗೆ ಬೇಕಾದುದನ್ನು ಆಯ್ಕೆ ಮಾಡಿಕೊಂಡು Ok ಗುಂಡಿಯನ್ನು ಒತ್ತಿದೊಡನೆ Nudi1 ಎಂಬ ಹೊಸ ಕಡತದ ಪರದೆ ಮೂಡುತ್ತದೆ.

ಪರಿವಿಡಿ ಪಟ್ಟಿ :
ಕಡತ ಸಂಪಾದನೆ ವಿನ್ಯಾಸ ಆಯ್ಕೆ ತೋರಿಸು ಉಪಕರಣಗಳು ಕಿಟಕಿ ಸಹಾಯ

ಕಡತ: 'ಕಡತ' ಮೇಲೆ ಸೂಚಕವನ್ನು ಒಯ್ದಾಗ ಒಂದು ಉಪಪರಿವಿಡಿ ಪಟ್ಟಿ ಮೂಡುತ್ತದೆ. ನಾಲ್ಕು ಗುಂಪುಗಳಲ್ಲಿ ಹತ್ತು ವಿವಿಧ ಆಯ್ಕೆಗಳು ಇದರಲ್ಲಿವೆ.

ಅ) ಹೊಸ, ತೆಗೆ, ಮುಚ್ಚು, ಉಳಿಸು, ಅಂತೆಉಳಿಸು, ಯುಟಿಎಫ್-೧೬ರಂತೆ ಉಳಿಸು, ಯುಟಿಎಫ್-೧೬ರಂತೆ ಉಳಿಸು
ಆ) ಮುದ್ರಿಸು, ಮುದ್ರಣ ಮುನ್ನೋಟ, ಮುದ್ರಣ ಸಿದ್ಧತೆ
ಇ) ಇತ್ತೀಚಿನ ಕಡತಗಳು
ಈ) ನಿರ್ಗಮಿಸು

ಆಯ್ಕೆಗಳು:
**ಹೊಸ** – 'ಹೊಸ' ಎಂಬ ಈ ಮುಂಚೆ ವಿವರಿಸಿದ ಅಂಕಣ ಮೂಡುತ್ತದೆ
**ತೆಗೆ** – ನೀವು ಈಗಾಗಲೇ ಹಿಂದೆ ಉಳಿಸಿರುವ ಕಡತವನ್ನು ತೆಗೆಯಲು
**ಮುಚ್ಚು** – ಪ್ರದರ್ಶಕದ ಮೇಲಿರುವ ಕಡತವನ್ನು ಮುಚ್ಚಲು
**ಉಳಿಸು** – ಪ್ರದರ್ಶಕದ ಮೇಲಿರುವ ಕಡತವನ್ನು ಉಳಿಸಲು
**ಅಂತೆಉಳಿಸು** – ಪ್ರದರ್ಶಕದ ಮೇಲಿರುವ ಕಡತವನ್ನು ಹೊಸ ಹೆಸರಿನಲ್ಲಿ ಉಳಿಸಲು
**ಯುಟಿಎಫ್-೧೬ ರಂತೆ ಉಳಿಸು** – ಪ್ರದರ್ಶಕದ ಮೇಲಿರುವ ಕಡತವನ್ನು ಯೂನಿಕೋಡ್ ಶಿಷ್ಟತೆಯಂತೆ ಉಳಿಸು
**ಯುಟಿಎಫ್-೮ ರಂತೆ ಉಳಿಸು** – ಪ್ರದರ್ಶಕದ ಮೇಲಿರುವ ಕಡತವನ್ನು ಯೂನಿಕೋಡ್ ಶಿಷ್ಟತೆಯಂತೆ ಉಳಿಸು
**ಮುದ್ರಿಸು** – ಪ್ರದರ್ಶಕದ ಮೇಲಿರುವ ಕಡತವನ್ನು ಮುದ್ರಿಸಲು
**ಮುದ್ರಣ ಮುನ್ನೋಟ** – ಪ್ರದರ್ಶಕದ ಮೇಲಿರುವ ಕಡತದ ಮುದ್ರಣ ವಿನ್ಯಾಸದ ಮುನ್ನೋಟಕ್ಕಾಗಿ

**ಮುದ್ರಣಸಿದ್ಧತೆ** – ಪ್ರದರ್ಶಕದ ಮೇಲಿರುವ ಕಡತವು ಯಾವ ರೀತಿ ಮುದ್ರಣವಾಗಬೇಕೆಂಬ ಬಗ್ಗೆ ಪೂರ್ವ ತಯಾರಿ ಮಾಡುವುದಕ್ಕಾಗಿ
**ಇತ್ತೀಚಿನ ಕಡತ** – ಇತ್ತೀಚೆಗೆ ತೆಗೆದಿರುವ ಕಡತಗಳ ಹೆಸರುಗಳು
**ನಿರ್ಗಮನ** – ನುಡಿ ಪದಸಂಸ್ಕಾರಕದಿಂದ (NudiEditor) ಹೊರಬರಲು

ಸಂಪಾದನೆ: 'ಸಂಪಾದನೆ' ಪರಿವಿಡಿಯ ಮೇಲೆ ಸೂಚಕವನ್ನು ಒಯ್ದಾಗ ಮೂರು ಗುಂಪುಗಳಲ್ಲಿ ವಿಂಗಡಿಸಿರುವ ಎಂಟು ಆಯ್ಕೆಗಳು ದೊರೆಯುತ್ತವೆ.

ಅ. ರದ್ದುಮಾಡು

ಆ. ಕತ್ತರಿಸು, ನಕಲಿಸು, ಅಂಟಿಸು, ಎಲ್ಲಾಆಯ್ಕೆಮಾಡು
ಇ. ಹುಡುಕು, ಮುಂದೆಹುಡುಕು, ಬದಲಿಸು
ಈ. ಆಯ್ಕೆಗಳು...

ಆಯ್ಕೆಗಳು:
**ರದ್ದುಮಾಡು –** ಹಿಂದಿನ ಕ್ರಿಯೆಯನ್ನು ರದ್ದುಗೊಳಿಸಲು
**ಕತ್ತರಿಸು –** ಆಯ್ಕೆ ಮಾಡಿದ ಮಾಹಿತಿ ಭಾಗವನ್ನು ಕತ್ತರಿಸಲು
**ನಕಲಿಸು –** ಆಯ್ಕೆ ಮಾಡಿದ ಮಾಹಿತಿ ಭಾಗವನ್ನು ನಕಲು ಮಾಡಿ ನಕಲು ಫಲಕದಲ್ಲಿ ಇರಿಸಲು
**ಅಂಟಿಸು –** ನಕಲು ಫಲಕದಲ್ಲಿ ಇರುವ ಮಾಹಿತಿಯನ್ನು ಕಡತದ ಬೇಕೆನಿಸಿದ ಜಾಗದಲ್ಲಿ ಅಂಟಿಸಲು
**ಎಲ್ಲಾ ಆಯ್ಕೆ ಮಾಡು –** ಕಡತದ ಸಮಗ್ರ ಮಾಹಿತಿಯನ್ನು ಆಯ್ಕೆಮಾಡಲು
**ಹುಡುಕು –** ಅಗತ್ಯವಾದ ಪಠ್ಯಭಾಗವನ್ನು ಹುಡುಕಲು
**ಮುಂದೆ ಹುಡುಕು –** ಹಿಂದಿನ ಆದೇಶದಂತೆ ಮುಂದಿನ ಪಠ್ಯದಲ್ಲೂ ಹುಡುಕಲು
**ಬದಲಿಸು –** ಹುಡುಕಿದ ಪಠ್ಯಭಾಗವನ್ನು ಹೊಸ ಪಠ್ಯಕ್ಕೆ ಬದಲಾಯಿಸಲು

**ಆಯ್ಕೆಗಳು –**

೧. ಪದಪರೀಕ್ಷೆಗೆ ಪದಕೋಶದ ಆಯ್ಕೆ :
ಇದರಲ್ಲಿ ಮುಖ್ಯಕೋಶ ಮತ್ತು ಎರಡನೆಯ ಕೋಶ ಎಂಬ ಎರಡು ಸೌಲಭ್ಯಗಳನ್ನು ನೀಡಲಾಗಿದೆ. ಮುಖ್ಯಕೋಶವನ್ನು ಯಾರೂ ಬದಲಿಸುವಂತಿಲ್ಲ. ಬಳಕೆದಾರರು ಉಪಕರಣ–ಪದಪರೀಕ್ಷೆ ಬಳಸುವಾಗ ಸೇರಿಸಲು ಇಚ್ಛಿಸುವ ಹೊಸಪದಗಳು 'ಎರಡನೆಯ ಕೋಶ' ದಲ್ಲಿ ದಾಖಲಾಗುತ್ತವೆ.

೨. ಪ್ರತಿಬಾರಿಯೂ ನೇರನುಡಿಯನ್ನು ಪ್ರಾರಂಭಿಸು ಆಯ್ಕೆ :
ಇದನ್ನು ಆಯ್ಕೆ ಮಾಡಿದರೆ ಗಣಕದ ತೆರೆಯ ಮೇಲಿರುವ ನುಡಿ ೪.೦ ಅನ್ನು ಕ್ಲಿಕ್ಕಿಸಿದಾಗ ನುಡಿ ಲಾಂಛನವು ಗಣಕ ಪರದೆಯ ಮೇಲೆ ಕೆಳಬಲಮೂಲೆಯಲ್ಲಿ ಕುಳಿತುಕೊಳ್ಳುತ್ತದೆ(Nudi direct). ಈ ಆಯ್ಕೆಯನ್ನು ಮಾಡದಿದ್ದರೆ ನುಡಿ ೪.೦ ಕ್ಲಿಕ್ಕಿಸಿದಾಗ ಪ್ರತಿಬಾರಿಯೂ ನುಡಿ ಸಂಪಾದಕವು ತೆರೆದುಕೊಳ್ಳುತ್ತದೆ.

೩. ಪ್ರತಿಬಾರಿಯೂ ಪ್ರಾರಂಭ ತೆರೆಯನ್ನು ತೋರಿಸು ಆಯ್ಕೆ :
ನುಡಿ ೪.೦ ಕ್ಲಿಕ್ಕಿಸಿದಾಗ ಪ್ರದರ್ಶಕದ ತೆರೆಯ ಮೇಲೆ ನುಡಿಯ ಪ್ರಾರಂಭತೆರೆಯು ಮೂಡಬೇಕೇ ಬೇಡವೇ ಎಂಬುದನ್ನು ಇಲ್ಲಿ ಸೂಚಿಸಬಹುದಾಗಿದೆ.

ವಿನ್ಯಾಸ: 'ವಿನ್ಯಾಸ' ಪರಿವಿಡಿಯ ಮೇಲೆ ಸೂಚಕವನ್ನು ಒಯ್ದಾಗ ಐದು ಗುಂಪುಗಳಲ್ಲಿ ಒಟ್ಟು ಒಂಬತ್ತು ಆಯ್ಕೆಗಳು ದೊರೆಯುತ್ತವೆ.

ಅ. ದಪ್ಪ ಅಕ್ಷರ, ಓರೆ ಅಕ್ಷರ, ಕೆಳಗೆರೆ
ಆ. ಅಡ್ಡಗೆರೆ
ಇ. ಗಾತ್ರ ಹಿಗ್ಗಿಸು, ಗಾತ್ರ ಕುಗ್ಗಿಸು
ಈ. ಅಕ್ಷರದ ಬಣ್ಣ, ಹಿಂಭಾಗದ ಬಣ್ಣ
ಉ. ಬುಲೆಟನ್ನು ಸೇರಿಸು

ಆಯ್ಕೆಗಳು :
**ದಪ್ಪ ಅಕ್ಷರ** – ಅಕ್ಷರವನ್ನು ದಪ್ಪವಾಗಿಸಲು
**ಓರೆ ಅಕ್ಷರ** – ಅಕ್ಷರವನ್ನು ಓರೆಯಾಗಿಸಲು
**ಕೆಳಗೆರೆ** – ಅಕ್ಷರದ ತಳದಲ್ಲಿ ಗೆರೆ ಮೂಡಿಸಲು
**ಅಡ್ಡಗೆರೆ** – ಅಕ್ಷರದ ಮಧ್ಯಭಾಗದಲ್ಲಿ ಅಡ್ಡವಾಗಿ ಗೆರೆ ಮೂಡಿಸಲು
**ಗಾತ್ರ ಹಿಗ್ಗಿಸು** – ಅಕ್ಷರದ ಗಾತ್ರವನ್ನು ಹೆಚ್ಚುಮಾಡಲು
**ಗಾತ್ರ ಕುಗ್ಗಿಸು** – ಅಕ್ಷರದ ಗಾತ್ರವನ್ನು ಕಡಮೆ ಮಾಡಲು
**ಅಕ್ಷರದ ಬಣ್ಣ** – ಆಯ್ದ ಅಕ್ಷರ/ಅಕ್ಷರಗಳ ಬಣ್ಣವನ್ನು ಬದಲಾಯಿಸಲು
**ಹಿಂಭಾಗದ ಬಣ್ಣ** – ಹಿನ್ನೆಲೆಯ ಬಣ್ಣವನ್ನು ಬದಲಾಯಿಸಲು
**ಬುಲೆಟನ್ನು ಸೇರಿಸು** – ಸಾಲಿನ ಆರಂಭದಲ್ಲಿ ಬುಲೆಟನ್ನು ಸೇರಿಸಲು
ಆಯ್ಕೆ: 'ಆಯ್ಕೆ' ಪರಿವಿಡಿಯ ಮೇಲೆ ಸೂಚಕವನ್ನು ಒಯ್ದಾಗ ಎಂಟು ಆಯ್ಕೆಗಳು ದೊರೆಯುತ್ತವೆ.

ಆಯ್ಕೆಗಳು
**ಅಕ್ಷರ ವಿನ್ಯಾಸ** – ಅಕ್ಷರಶೈಲಿ,ಗಾತ್ರ,ಬಣ್ಣ ಮತ್ತು ಇತರ ಪಠ್ಯಗುಣಗಳನ್ನು ಆಯ್ದುಕೊಳ್ಳಲು/ಬದಲಿಸಲು
**ಏಕ ಭಾಷೆ** – ಕೇವಲ ಕನ್ನಡ ಲಿಪಿಯನ್ನು ಬಳಸಲು
**ದ್ವಿ ಭಾಷೆ** – ಕನ್ನಡ ಮತ್ತು ಇಂಗ್ಲೀಷ ಲಿಪಿಗಳನ್ನು ಬಳಸಲು
**ಇಂಜಿನ್ ನಿಷ್ಕ್ರಿಯಗೊಳಿಸು/ಇಂಜಿನ್‌ಸಕ್ರಿಯಗೊಳಿಸು** – ಇಂಜಿನ್ ನಿಷ್ಕ್ರಿಯವಾಗಬೇಕೋ (Scroll Lock Off or F12 Key Off) ಅಥವಾ ಇಂಜಿನ್ ಸಕ್ರಿಯವಾಗಬೇಕೋ (Scroll Lock On or F12 Key On) ಎಂಬುದನ್ನು ಸೂಚಿಸಲು ಈ ಆಯ್ಕೆಯು ಲಭ್ಯವಿದೆ.

**ಸ್ಕ್ರೋಲ್‌ಲಾಕ್ ಕೀ ಬಳಸು** – ನುಡಿ ಇಂಜಿನ್ ಕಾರ್ಯನಿರ್ವಹಣೆಯಲ್ಲಿರುವಾಗ ಕನ್ನಡವನ್ನು ಆಯ್ಕೆ ಮಾಡಲು Scroll Lock Key ಯನ್ನು ಬಳಸಬೇಕಾದಲ್ಲಿ ಈ ಆಯ್ಕೆಯನ್ನು ಮಾಡಿಕೊಳ್ಳಬೇಕು.

**ಎಫ್೧೨ ಕೀ ಬಳಸು** – ನುಡಿ ಇಂಜಿನ್ ಕಾರ್ಯನಿರ್ವಹಣೆಯಲ್ಲಿರುವಾಗ ಕನ್ನಡವನ್ನು ಆಯ್ಕೆ ಮಾಡಲು Scroll Lock Key ಕೀ ಬಳಸುವ ಬದಲಾಗಿ F12 Key ಯ ಬಳಸಲು ಈ ಆಯ್ಕೆಯನ್ನು ಮಾಡಿಕೊಳ್ಳಬೇಕು.

**ಎಡಕ್ಕೆ ಹೊಂದಿಸು** – ಪಠ್ಯದ ಮಾಹಿತಿಯ ಪ್ರತಿಯೊಂದು ಸಾಲನ್ನೂ ಎಡ ಮಾರ್ಜಿನ್‌ಗೆ ಹೊಂದಿಸಲು
**ಮಧ್ಯ ಹೊಂದಿಸು** – ಪುಟದ ಮಧ್ಯಕ್ಕೆ ಹೊಂದಿಸಲು
**ಬಲಕ್ಕೆ ಹೊಂದಿಸು** – ಪಠ್ಯದ ಮಾಹಿತಿಯ ಸಾಲನ್ನು ಬಲ ಮಾರ್ಜಿನ್‌ಗೆ ಹೊಂದಿಸಲು
**ಆರೋಹಣವಾಗಿ ವಿಂಗಡಿಸು** – ಆಯ್ಕೆ ಮಾಡಿದ ಪಠ್ಯ ಮಾಹಿತಿಯ ಸಾಲುಗಳನ್ನು ಕನ್ನಡದ ಅಕಾರಾದಿಯಾಗಿ ಆರೋಹಣಕ್ರಮದಲ್ಲಿ (ಅ ಇಂದ ಳ ವರೆಗೆ) ವಿಂಗಡಿಸಲು
+**ಅವರೋಹಣವಾಗಿ ವಿಂಗಡಿಸು** – ಅವರೋಹಣಕ್ರಮದಲ್ಲಿ(ಳ ಇಂದ ಅ ವರೆಗೆ) ವಿಂಗಡಿಸಲು

ತೋರಿಸು: 'ತೋರಿಸು' ಪರಿವಿಡಿಯ ಮೇಲೆ ಸೂಚಕವನ್ನು ಒಯ್ದಾಗ ಎರಡು ಆಯ್ಕೆಗಳು ದೊರೆಯುತ್ತವೆ.

ಆಯ್ಕೆಗಳು
**ಉಪಕರಣ ಪಟ್ಟಿ** – ಹೊಸಕಡತ, ತೆರೆ ಮುಂತಾದ ಆಯ್ಕೆ ಉಪಕರಣಗಳು ಹಾಗೂ ನುಡಿ ಲಾಂಛನ

ಇರುವ ಉಪಕರಣ ಪಟ್ಟಿಯನ್ನು ಪ್ರದರ್ಶಿಸಿರಲು/ಮರೆಮಾಡಲು
**ಸ್ಥಿತಿ ಪಟ್ಟಿ** – ಪದ ಸಂಸ್ಕಾರಕ ಅಂಕಣದ ಕೆಳಗಿನ ಸ್ಥಿತಿ ಪಟ್ಟಿಯನ್ನು ಪ್ರದರ್ಶಿಸಲು/ಮರೆಮಾಡಲು

ಉಪಕರಣಗಳು: ಪದ ಪರೀಕ್ಷಕ
ಸಂಪಾದಕದಲ್ಲಿ ಮಾಹಿತಿಗಳನ್ನು ಊಡಿಸಿದ ನಂತರ ಅಥವಾ ಈಗಾಗಲೇ ಸಿದ್ಧಪಡಿಸಿರುವ ಕಡತವನ್ನು ಸಂಪಾದಕದಲ್ಲಿ ತೆರೆದ ನಂತರ ಉಪಕರಣಗಳು–ಪದಪರೀಕ್ಷಕವನ್ನು ಆಯ್ಕೆಮಾಡಿಕೊಳ್ಳಿ. ದಾಖಲಿತ ಪದವು ಪದಕೋಶದಲ್ಲಿ ಇಲ್ಲದಿದ್ದರೆ ಅದಕ್ಕೆ ಪರ್ಯಾಯವಾದ ಪದಗಳನ್ನು ಪದಪರೀಕ್ಷಕವು ಸೂಚಿಸುತ್ತದೆ. ಅವುಗಳಲ್ಲಿ ಸೂಕ್ತವೆನಿಸಿದ್ದನ್ನು ಆಯ್ಕೆಮಾಡಿಕೊಳ್ಳಬಹುದು ಅಥವಾ ಕಡೆಗಣಿಸಬಹುದು. 'ಬದಲಾಯಿಸು' ಆಯ್ಕೆಯಲ್ಲಿ ನೀವು ಕೀಲಿಸುವ ಪದವು ಪದಕೋಶಕ್ಕೆ ಸೇರಿಕೊಳ್ಳುತ್ತದೆ.
ಕಿಟಕಿ: 'ಕಿಟಕಿ' ಪರಿವಿಡಿಯ ಮೇಲೆ ಸೂಚಕವನ್ನು ಒಯ್ದಾಗ ಎರಡು ಗುಂಪುಗಳಲ್ಲಿ ಐದು ಆಯ್ಕೆಗಳು ದೊರೆಯುತ್ತವೆ.

ಅ. ನೇರ ನುಡಿ

ಆ. ಹೊಸ ಕಿಟಕಿ, ಮೇಲೆ ಜೋಡಿಸು, ಸಮವಾಗಿ ಜೋಡಿಸು, ಲಾಂಛನ (Icon) ಜೋಡಿಸು ಆಯ್ಕೆಗಳು

**ನೇರ ನುಡಿ** – 'ನುಡಿ'ಯನ್ನು ಇತರ ತಂತ್ರಾಂಶಗಳಲ್ಲಿ ಬಳಸಲು
**ಹೊಸ ಕಿಟಕಿ** – ಹೊಸ ಕಿಟಕಿಯನ್ನು ತೆರೆಯಲು
**ಮೇಲೆ ಜೋಡಿಸು** – ಎಲ್ಲಾ ಕಿಟಕಿಗಳನ್ನು ಮುಚ್ಚಲು
**ಸಮವಾಗಿ ಜೋಡಿಸು** – ಕಿಟಕಿಗಳನ್ನು ಪಕ್ಕಕ್ಕೆ ಸೇರಿಸಲು
**ಲಾಂಛನ (Icon) ಜೋಡಿಸು** – ಲಾಂಛನಗಳನ್ನು ಜೋಡಿಸಲು
ಸಹಾಯ: 'ಸಹಾಯ' ಪರಿವಿಡಿಯ ಮೇಲೆ ಸೂಚಕವನ್ನು ಒಯ್ದಾಗ ಎರಡು ಗುಂಪುಗಳಲ್ಲಿ ಮೂರು ಆಯ್ಕೆಗಳು ದೊರೆಯುತ್ತವೆ.

ಅ. ಸಹಾಯ ಪರಿವಿಡಿ, ಕೀಲಿಮಣೆ ವಿನ್ಯಾಸ
ಆ. ನುಡಿಯಬಗ್ಗೆ ಆಯ್ಕೆಗಳು
**ಸಹಾಯ ಪರಿವಿಡಿ** – 'ನುಡಿ' ತಂತ್ರಾಂಶವನ್ನು ಬಳಸಲು ಅಗತ್ಯವಾದ ಸಹಾಯ ಮಾಹಿತಿ ಪಡೆಯಲು
**ಕೀಲಿಮಣೆ ವಿನ್ಯಾಸ** – 'ನುಡಿ' ತಂತ್ರಾಂಶದ ಕೀಲಿಮಣೆ ವಿನ್ಯಾಸದ ಚಿತ್ರ ಪಡೆಯಲು
**ನುಡಿಯಬಗ್ಗೆ** – 'ನುಡಿ' ಕುರಿತಾದ ಮಾಹಿತಿ

ಉಪಕರಣ ಲಾಂಛನಗಳ ಪಟ್ಟಿ :
೧. ಹೊಸ ಕಡತವನ್ನು ಪ್ರಾರಂಭಿಸಲು
೨. ಈಗಾಗಲೇ ಇರುವ ಕಡತವನ್ನು ತೆಗೆಯಲು
೩. ಪ್ರದರ್ಶಕ ತೆರೆಯ ಮೇಲೆ ಇರುವ ಕಡತವನ್ನು ಉಳಿಸಲು
೪. ಆಯ್ಕೆ ಮಾಡಿದ ಮಾಹಿತಿ ಭಾಗವನ್ನು ಕತ್ತರಿಸಲು
೫. ನಕಲಿಸು – ಆಯ್ಕೆ ಮಾಡಿದ ಮಾಹಿತಿ ಭಾಗವನ್ನು ನಕಲು ಮಾಡಿ ನಕಲು ಫಲಕದಲ್ಲಿ ಇರಿಸಲು
೬. ಅಂಟಿಸು – ನಕಲು ಫಲಕದಲ್ಲಿ ಇರುವ ಮಾಹಿತಿಯನ್ನು ಕಡತದ ಬೇಕೆನಿಸಿದ ಜಾಗದಲ್ಲಿ ಅಂಟಿಸಲು
೭. ಮುದ್ರಿಸು
೮. ಅಕ್ಷರ ವಿನ್ಯಾಸ

೯. ಎಡಕ್ಕೆ ಹೊಂದಿಸು
೧೦. ಮಧ್ಯಕ್ಕೆ ಹೊಂದಿಸು
೧೧. ಬಲಕ್ಕೆ ಹೊಂದಿಸು
೧೨. ಅ ಇಂದ ಳ ವರೆಗೆ ಅಕಾರಾದಿ
೧೩. ಳ ಇಂದ ಅ ವರೆಗೆ ಅಕಾರಾದಿ
೧೪. ಪ್ರದರ್ಶಕ ತೆರೆಯ ಕಡತವನ್ನು ವಿದ್ಯುನ್ಮಾನ ಆಂಚೆಯೊಡನೆ ಸೇರ್ಪಡೆಯಾಗಿ ಕಳುಹಿಸುವುದು

೧೫. ನುಡಿ ಲಾಂಛನ (Nudi Direct) – 'ನುಡಿ' ಪದಸಂಸ್ಕಾರಕವನ್ನು ಬಿಟ್ಟು ನುಡಿ ಲಿಪಿಯನ್ನು ಎಂ.ಎಸ್.ವರ್ಡ್, ಪವರ್‌ಪಾಯಿಂಟ್ ಮುಂತಾದ ಆನ್ವಯಿಕ ತಂತ್ರಾಂಶಗಳಲ್ಲಿ ಬಳಸಲು ಇದನ್ನು ಕ್ಲಿಕ್ಕಿಸಿದಾಗ ನುಡಿ ಪದಸಂಸ್ಕಾರಕವು ಮರೆಯಾಗಿ 'ನುಡಿ' ಲಾಂಛನವು ಪ್ರದರ್ಶಕದ ಕೆಳ ಅಂಚಿನ ಬಲ ಮೂಲೆಯಲ್ಲಿ ಕಾಣಿಸಿಕೊಳ್ಳುತ್ತದೆ.

ಇತರ ತಂತ್ರಾಂಶಗಳಲ್ಲಿ 'ನುಡಿ'ಯ ಬಳಕೆ

ನುಡಿ ಪದಸಂಸ್ಕಾರಕದ ಕಿಟಕಿ ಆಯ್ಕೆಯ 'ನೇರನುಡಿ' ಯನ್ನು ಆಯ್ಕೆ ಮಾಡಿ.

- ನುಡಿ ಸದಸಂಸ್ಕಾರಕವು ಕಾಣದಾಗಿ ಲಾಂಛನವು ತೆರೆಯ ಕೆಳಗೆ ಬಲಮೂಲೆಯಲ್ಲಿ ಕೂರುತ್ತದೆ.

- MSWORD, EXCEL, POWER POINT, PAGEMAKER ಇತ್ಯಾದಿ ಎಲ್ಲಾ ತಂತ್ರಾಂಶಗಳಲ್ಲೂ ಕನ್ನಡವನ್ನು ಬಳಸಲು ಈಗ ಸಾಧ್ಯವಾಗುತ್ತದೆ.

ಗಮನಿಸಬೇಕಾದ ಕೆಲವು ಅಂಶಗಳು

ಗಣಕದಲ್ಲಿ ಕನ್ನಡ ಅಕ್ಷರಗಳು ಮೂಡಬೇಕಾದರೆ `Scroll Lock' ದೀಪ ಹೊತ್ತಿರಬೇಕು ಅಥವಾ 'F12' ಕೀಯನ್ನು ಬಳಸಬಹುದು.

ಪ್ರದರ್ಶಕ ತೆರೆಯ (Desk top) ಕೆಳಗೆ ಬಲ ಮೂಲೆಯ ಟ್ರೇನಲ್ಲಿ 'ನುಡಿ' ಲಾಂಛನವು ಇದ್ದರೆ ಇತರ ತಂತ್ರಾಶಗಳಲ್ಲಿ 'ನುಡಿ'ಯನ್ನು ಬಳಸಲು ಸಾಧ್ಯ. ಈ ಲಾಂಛನವು ಇಲ್ಲದಿದ್ದರೆ ಕೆಳಕಂಡಂತೆ ಮುಂದುವರೆಯಬೇಕು.

ಪ್ರದರ್ಶಕ ತೆರೆ ಮೇಲೆ ಇರುವ ಓಣು ೪.೦ ಲಾಂಛನದ ಮೇಲೆ ಕ್ಲಿಕ್ಕಿಸಿ. ಲಾಂಛನವು ತೆರೆಯ ಕೆಳಗೆ ಬಲಮೂಲೆಯಲ್ಲಿ ಕೂರುತ್ತದೆ.

Nudi 4.0 ಮೂಲಕ ನುಡಿ ಪದಸಂಸ್ಕಾರಕದಲ್ಲಿ ಕೆಲಸ ಮಾಡುತ್ತಿದ್ದರೆ 'ಕಿಟಕಿ' ಮೆನುವಿನಲ್ಲಿಯ 'ನೇರ ನುಡಿ' ಯನ್ನು ಕ್ಲಿಕ್ಕಿಸಿ. ನುಡಿ ಪದಸಂಸ್ಕಾರಕವು ಕಾಣದಾಗಿ ಲಾಂಛನವು ತೆರೆಯ ಕೆಳಗೆ ಬಲಮೂಲೆಯಲ್ಲಿ ಕೂರುತ್ತದೆ.

MSWORD, EXCEL, POWER POINT, PAGEMAKER ಇತ್ಯಾದಿ ಎಲ್ಲಾ ವಿಂಡೋಸ್ ತಂತಾಂ್ರಶಗಳಲ್ಲೂ ಕನ್ನಡವನ್ನು ಬಳಸಲು ಈಗ ಸಾಧ್ಯವಾಗುತ್ತದೆ.

ಎಂಎಸ್ ಆಫೀಸ್ ಮುಂತಾದವುಗಳಲ್ಲಿ ಕನ್ನಡವನ್ನು ಬಳಸುವಾಗ `Tools' ಮೆನುವಿನ Auto Correct Option ನಲ್ಲಿನ ಇಂಗ್ಲಿಷ್ ಕುರಿತ ಆಯ್ಕೆಗಳನ್ನು ಬಳಸಬಾರದು.

ಎಂಎಸ್ ವರ್ಡ್ ಅಥವಾ ಎಂಎಸ್ ಎಕ್ಸೆಲ್‌ಗಳಲ್ಲಿ ಕನ್ನಡವನ್ನು ಬಳಸುವಾಗ Option ನಲ್ಲಿನ Spell Check ಮತ್ತು Grammer Check ಗಳನ್ನು ಬಳಸಬಾರದು.

ಎಂಎಸ್ ವರ್ಡ್‌ನಲ್ಲಿ Tools -> Customize -> OptionTab -> List Font Names in their Font ಆಯ್ಕೆಯನ್ನು ಅನೂರ್ಜಿತಗೊಳಿಸಿದರೆ ಅಕ್ಷರಪಟ್ಟಿಯಲ್ಲಿ ಅಕ್ಷರಗಳು ಸರಿಯಾಗಿ ಗೋಚರಿಸುತ್ತವೆ.

'ನುಡಿ' ತಂತ್ರಾಂಶದ ಜೊತೆಗೆ ನೀಡಲಾಗಿರುವ ಅಕ್ಷರ ಶೈಲಿಗಳು (Font) [ಕನ್ನಡ ಮತ್ತು ಇಂಗ್ಲಿಷ್ ಅಂಕಿಗಳನ್ನು ನೀಡುವ ಅಕ್ಷರ ಶೈಲಿಗಳು (ಫಾಂಟ್‌ಗಳು)]: Nudi 01 ರಿಂದ Nudi 18 ರವರೆಗೆ ಒಟ್ಟು ಹದಿನೆಂಟು ಅಕ್ಷರ ಶೈಲಿಗಳನ್ನು ನೀಡಲಾಗಿದೆ. Nudi 01e ಮುಂತಾದವನ್ನು ಇಂಗ್ಲೀಷ ಅಂಕಿಗಳಿಗಾಗಿಯೂ Nudi 01k ಮುಂತಾದವನ್ನು ಕನ್ನಡ ಅಂಕಿಗಳಿಗಾಗಿಯೂ ಬಳಸಬಹುದಾಗಿದೆ.

Nudi Akshara ಮತ್ತು Nudi Akshara 01 ರಿಂದ Nudi Akshara 14 ರವರೆಗೆ ಹದಿನೈದು ಅಕ್ಷರ ಶೈಲಿಗಳು ಕನ್ನಡ ಅಂಕಿಗಳನ್ನೂ Nudi Akshar ಮತ್ತು Nudi Akshar 01 ರಿಂದ Nudi Akshar 14 ರವರೆಗೆ ಹದಿನೈದು ಅಕ್ಷರ ಶೈಲಿಗಳು ಇಂಗ್ಲೀಷ್ ಅಂಕಿಗಳನ್ನೂ ನೀಡುತ್ತವೆ.

ಸೂಚನೆ: ಮೇಲಿನ ಅಕ್ಷರಶೈಲಿಗಳನ್ನು ಬಳಸುವಾಗ 'ಏಕಭಾಷೆ' ಯನ್ನು ಆಯ್ಕೆಮಾಡಿಕೊಂಡಿರಬೇಕು. Nudi B-Akshara ಅಕ್ಷರಶೈಲಿಗಳನ್ನು ಬಳಸಲು 'ದ್ವಿ ಭಾಷೆ' ಯನ್ನು ಆಯ್ಕೆಮಾಡಿಕೊಂಡಿರಬೇಕು.

ವಿಶೇಷತೆ ಹಾಗೂ ಉಪಯುಕ್ತತೆಗಳು

ೕರ್ಕಾರವು ನಿಗದಿಪಡಿಸಿರುವ ಶಿಷ್ಟತೆ, ಏಕರೂಪತೆಗಳನ್ನು ಒಳಗೊಂಡಿದೆ.

- ಉಚಿತವಾಗಿ ದೊರಕುತ್ತದೆ.
- ಕನ್ನಡ ಮಾಹಿತಿಗಳ ಅಕಾರಾದಿ ವಿಂಗಡಣೆಯ ಸೌಲಭ್ಯವನ್ನು ಹೊಂದಿದೆ;
- ಹುಡುಕು, ಹುಡುಕು–ಬದಲಿಸು ಮುಂತಾದ ಸೌಲಭ್ಯಗಳನ್ನು ಕನ್ನಡದಲ್ಲೇ ನೀಡಲಾಗಿದೆ;
- ಬಹುಮುಖ್ಯವಾಗಿ ಅರ್ಕಾವೊತ್ತಿನ ಮತ್ತು ಇತರ ಸಮಸ್ಯೆಗಳಿಗೆ ಸಮರ್ಪಕವಾದ ಪರಿಹಾರಗಳನ್ನು ಒದಗಿಸಿದೆ;

- ದತ್ತ ಸಂಸ್ಕರಣೆಗೆ ಅಗತ್ಯವಾದ ಅನುಕೂಲತೆಗಳನ್ನು ಒದಗಿಸಿದೆ;

- ಅನೇಕ ಅಕ್ಷರಶೈಲಿಗಳನ್ನು ನೀಡಲಾಗಿದೆ;

- ಪದಸಂಸ್ಕರಣೆಗೆ ಮತ್ತಷ್ಟು ಸೌಲಭ್ಯಗಳನ್ನು ನೀಡಿದೆ;

- ಅಂತರಜಾಲ ಮತ್ತು ವಿದ್ಯುನ್ಮಾನ ಅಂಚೆ ಕ್ಷೇತ್ರಗಳಲ್ಲೂ ಕನ್ನಡವನ್ನು ಯಶಸ್ವಿಯಾಗಿ ಬಳಸಲು ಸಾಧ್ಯವಾಗಿಸಿದೆ;

- ದತ್ತ ಸಂಸ್ಕ ರಣೆಯ ಸಂದರ್ಭಗಳಲ್ಲಿ, ಒಂದೇ ಪದಗುಚ್ಛದಲ್ಲಿ ತೀರ ಅನಿವಾರ್ಯವಾಗಿ ಕನ್ನಡ ಹಾಗೂ ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಮಾಹಿತಿಗಳನ್ನು ದಾಖಲಿಸಿ ಬಳಸಬೇಕಾದರೆ ಅದಕ್ಕೆ ಅಗತ್ಯವಾದ ದ್ವಿಭಾಷಾತ್ಮಕ ಅಕ್ಷರ ಶೈಲಿಯನ್ನು ನೀಡಲಾಗಿದೆ ಹಾಗೂ ಇದಕ್ಕೆ ಅಗತ್ಯವಾದ ತಂತ್ರಾಂಶವನ್ನು ಅಭಿವೃದ್ಧಿಗೊಳಿಸಲಾಗಿದೆ;

- ನುಡಿಯಲ್ಲಿ ಕೀಲಿಸಿದ ಮಾಹಿತಿಗಳನ್ನು ಯೂನಿಕೋಡ್ ಹಾಗೂ ಯುಟಿಎಫ಼್೮ ಸಂಕೇತಗಳ ಕಡತಗಳಾಗಿಯೂ ಕಾಪಿಡಬಹುದಾಗಿದೆ;

- ಪದಪರೀಕ್ಷೆ ಸೌಲಭ್ಯವನ್ನು ನೀಡಲಾಗಿದೆ; ಕನ್ನಡಕ್ಕೆ ಅಗತ್ಯವಾದ ಆನ್ವಯಿಕ ತಂತ್ರಾಂಶಗಳನ್ನು ಅಭಿವೃದ್ಧಿಗೊಳಿಸಲು ಅಗತ್ಯವಾದ ತಂತ್ರಾಂಶ ಅಭಿವೃದ್ಧಿ ಸಲಕರಣೆಗಳನ್ನು (Software Development Kit) ನೀಡಲಾಗಿದೆ.

ಬಳಕೆಯ ಕ್ಷೇತ್ರಗಳು

ವಿಂಡೋಸ್ (೯೫, ೯೮, ಎನ್‌ಟಿ, ೨೦೦೦, ಎಕ್ಸ್‌ಪಿ) ಅಂಕಣದ ಎಲ್ಲ ಆನ್ವಯಿಕ (ಅಪ್ಲಿಕೇಶನ್) ತಂತ್ರಾಂಶಗಳು

- ಲೋಟಸ್ ಸ್ಮಾರ್ಟ್ ಸೂಟ್

- ಎಲ್ಲ ರೀತಿಯ ಪದ ಸಂಸ್ಕರಣೆ (ವರ್ಡ್ ಪ್ರಾಸೆಸಿಂಗ್) (ಎಂಎಸ್ ಆಫೀಸು, ಸ್ಟಾರ್ ಆಫೀಸು, ಪೇಜ್‌ಮೇಕರ್ ಇತ್ಯಾದಿ)

- ದತ್ತ ಸಂಸ್ಕರಣೆ (ಡೇಟಾ ಪ್ರಾಸೆಸಿಂಗ್) (ಎಂಎಸ್ ಆಕ್ಸೆಸ್, ವಿಷುಅಲ್ ಬೇಸಿಕ್, ಎಸ್‌ಕ್ಯೂಎಲ್, ಅರಾಕಲ್, ವಿಷುಅಲ್ ಫಾಕ್ಸ್‌ಪ್ರೋ ಇತ್ಯಾದಿ)

- ಆಂತರಿಕಜಾಲ (ಇಂಟ್ರಾನೆಟ್) ಹಾಗೂ ಅಂತರಜಾಲ (ವೆಬ್‌ಸೈಟ್) ಅನ್ವಯಗಳು, ವಿ–ಅಂಚೆ (ಇಂಟರ್‌ನೆಟ್) ಸೇವೆಗಳು.

ಎಂ.ಎಸ್.ವರ್ಡ್ / ಎಂ.ಎಸ್.ಎಕ್ಸೆಲ್ ದಲ್ಲಿ ಕನ್ನಡ ಬಳಸುವ ಸೌಲಭ್ಯ

ಎಂ.ಎಸ್.ವರ್ಡ್‌ನಲ್ಲಿ ನುಡಿ ೪.೦ ರಿಂದ ಈ ಕೆಳಗಿನ ಸೌಲಭ್ಯಗಳು ದೊರೆಯುತ್ತವೆ.

ಕನ್ನಡಕ್ಕಾಗಿಯೇ ವಿಶೇಷ ಕಡತ ಎಂಎಸ್ ವರ್ಡ್‌ನಲ್ಲಿ File->New ಆಯ್ಕೆಯ ನಂತರ Kannada ಎಂಬುದರ ಮೇಲೆ ಎರಡು ಬಾರಿ ಕ್ಲಿಕ್ (Double click) ಮಾಡಿದಾಗ ಕನ್ನಡಕ್ಕಾಗಿಯೇ ವಿಶೇಶ ಅನುಕೂಲತೆಗಳನ್ನು ನೀಡಬಲ್ಲ ಹೊಸ ಕಡತವು ತೆರೆದುಕೊಳ್ಳುತ್ತದೆ. ಸಲಕರಣೆಪಟ್ಟಿಯ ಮೇಲ್ಭಾಗದಲ್ಲಿ ನಾಲ್ಕು ಹೊಸ ಆಯ್ಕೆಗಳು ಕಾಣಬರುತ್ತವೆ.

೧. ಕನ್ನಡ–ಇಂಗ್ಲಿಷ್ ನಡುವೆ ಅಕ್ಷರಶೈಲಿಯ ಬದಲಾವಣೆ (Nudi Kannada-English) – ಸೂಚಕವನ್ನು ಮೊದಲ ಲಾಂಛನದ ಮೇಲೆ ಕ್ಲಿಕ್ ಮಾಡಬೇಕು. ಇದರಿಂದ ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಿಗೆ ಬದಲಿಸಿಕೊಳ್ಳಲು ಸುಲಭವಾಗುತ್ತದೆ.

೨. ಹುಡುಕು ಬದಲಿಸು (Nudi Find _Replace) – ಸೂಚಕವನ್ನು ಮೂರನೆಯ ಲಾಂಛನದ ಮೇಲೆ ಕ್ಲಿಕ್ ಮಾಡಬೇಕು. ಕನ್ನಡ ಪದಗಳನ್ನು ಪಠ್ಯದಲ್ಲಿ ಸುಲಭವಾಗಿ ಮತ್ತು ವೇಗವಾಗಿ ಹುಡುಕಲು ಮತ್ತು ಬದಲಿಸಲು ಈ ಸೌಲಭ್ಯವನ್ನು ಬಳಸಿಕೊಳ್ಳಬಹುದು.

೩. ಅಕಾರಾದಿ ವಿಂಗಡಣೆ (Nudi Sort) – ಸೂಚಕವನ್ನು ನಾಲ್ಕನೆಯ ಲಾಂಛನದ ಮೇಲೆ ಕ್ಲಿಕ್ ಮಾಡಬೇಕು. ಪಟ್ಟಿಕೆ (ಟೇಬಲ್) ಗಳಲ್ಲಿ ಅಥವಾ ಪಂಕ್ತಿಯಲ್ಲಿ (ಪ್ಯಾರಾಗ್ರಾಫ್)ನಲ್ಲಿ ಸಿದ್ಧಪಡಿಸಿದ ಮಾಹಿತಿಯನ್ನು ಕನ್ನಡ ಅಕಾರಾದಿ ವಿಂಗಡಣೆ ಮಾಡಿಕೊಳ್ಳಲು ಈ ಸೌಲಭ್ಯವನ್ನು ಬಳಸಿಕೊಳ್ಳಬಹುದು.

೪ ನುಡಿ ಪದಪರೀಕ್ಷಕ (Nudi Spell Check)

ಎಂ.ಎಸ್ ವರ್ಡ್ ಸಂಪಾದಕದಲ್ಲಿ ಮಾಹಿತಿಗಳನ್ನು ಊಡಿಸಿದ ನಂತರ ಅಥವಾ ಈಗಾಗಲೇ ಸಿದ್ಧಪಡಿಸಿರುವ ಕಡತವನ್ನು ಸಂಪಾದಕದಲ್ಲಿ ತೆರೆದ ನಂತರ ನುಡಿ ಪದಪರೀಕ್ಷಕವನ್ನು ಆಯ್ಕೆಮಾಡಿಕೊಂಡರೆ ಕೆಳಗಿನ ಚೌಕವು ಮೂಡುತ್ತದೆ.




ದಾಖಲಿತ ಪದವು ಪದಕೋಶದಲ್ಲಿ ಇಲ್ಲದಿದ್ದರೆ ಅದಕ್ಕೆ ಪರ್ಯಾಯವಾದ ಪದಗಳನ್ನು ಪದಪರೀಕ್ಷಕವು ಸೂಚಿಸುತ್ತದೆ. ಅವು ಗಳಲ್ಲಿ ಸೂಕ್ತವೆನಿಸಿದ್ದನ್ನು ಆಯ್ಕೆಮಾಡಿಕೊಂಡು ಬದಲಿಸಿಕೊಳ್ಳಬಹುದು ಅಥವಾ

ಕಡೆಗಣಿಸಬಹುದು. 'ನಿಘಂಟುವಿಗೆ ಸೇರಿಸು' ಆಯ್ಕೆಯಲ್ಲಿ ನೀವು ಕೀಲಿಸುವ ಪದವು ಪದಕೋಶಕ್ಕೆ ಸೇರಿಕೊಳ್ಳುತ್ತದೆ.

೬ಆಡಳಿತ ಪದಕೋಶ (Nudi Padakosha)

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ಪ್ರಕಟಿಸಿರುವ, ಇಂಗ್ಲಿಷ್–ಕನ್ನಡ ಆಡಳಿತ ಪದಕೋಶವನ್ನು ಎಂಎಸ್ ವರ್ಡ್‌ನಲ್ಲಿ ನೀಡಲಾಗಿದೆ. ಪದಕೋಶದಲ್ಲಿ ಸುಮಾರು ೮,೫೦೦ ಪದಗಳಿವೆ. ನುಡಿ ಪದಕೋಶವನ್ನು ಆಯ್ಕೆಮಾಡಿಕೊಂಡರೆ ಕೆಳಗಿನ ಚೌಕವು ಮೂಡುತ್ತದೆ.

ಬಳಕೆದಾರರಿಗೆ ಇಂಗ್ಲಿಷ್‌ಗೆ ಸಮನಾದ ಕನ್ನಡ ಪದವನ್ನು ಪಡೆಯಲು ನಿಮಗೆ ಬೇಕಾದ ಇಂಗ್ಲಿಷ್ ಪದವನ್ನು ಆಯ್ಕೆ ಮಾಡಿಕೊಂಡು 'ಸೇರಿಸಿ' ಗುಂಡಿಯನ್ನು ಒತ್ತಿದರೆ ಅದಕ್ಕೆ ಸಮನಾದ ಕನ್ನಡ ಪದವು ತೆರೆಯ ಮೇಲೆ ಮೂಡುತ್ತದೆ.

ನಿಮಗೆ ಬೇಕಾದ ಇಂಗ್ಲಿಷ್ ಪದವನ್ನು ಪಡೆಯುವುದು ಹೇಗೆ?
–ಯಾವುದಾದರೂ ಇಂಗ್ಲಿಷ್‌ಪದದ ಮೇಲೆ ಕ್ಲಿಕ್ಕಿಸಿ.
– ಬೇಕಾದ ಪದವನ್ನು ಬೆರಳಚ್ಚುಮಾಡಿ.

ಎಂ.ಎಸ್.ಎಕ್ಸೆಲ್‌ನಲ್ಲಿ ನುಡಿ ೪.೦ ರಿಂದ ಈ ಕೆಳಗಿನ ಸೌಲಭ್ಯಗಳು ದೊರೆಯುತ್ತವೆ.

ಕನ್ನಡಕ್ಕಾಗಿಯೇ ವಿಶೇಷ ಕಡತ ಎಂಎಸ್ ಎಕ್ಸೆಲ್‌ನಲ್ಲಿ File->New ಆಯ್ಕೆಯ ನಂತರ Kannada ಎಂಬುದರ ಮೇಲೆ ಎರಡು ಬಾರಿ ಕ್ಲಿಕ್ (Double click) ಮಾಡಿದಾಗ ಈ ಮುಂದಿನಂತೆ ಒಂದು ಪರದೆ.ಮೂಡುತ್ತದೆ.

ಈಗ ಎನೇಬಲ್ ಮ್ಯಾಕ್ರೋಸ್(Enable macro) ಎಂಬುದನ್ನು ಆಯ್ಕೆ ಮಾಡಿಕೊಂಡರೆ ಕನ್ನಡಕ್ಕಾಗಿಯೇ ವಿಶೇಷ ಅನುಕೂಲತೆಗಳನ್ನು ನೀಡಬಲ್ಲ ಹೊಸ ಕಡತವು ತೆರೆದುಕೊಳ್ಳುತ್ತದೆ. ಸಲಕರಣೆಪಟ್ಟಿಯ ಮೇಲ್ಭಾಗದಲ್ಲಿ ನಾಲ್ಕು ಹೊಸ ಆಯ್ಕೆಗಳು ಕಾಣಬರುತ್ತವೆ.

೧. ಕನ್ನಡ–ಇಂಗ್ಲಿಷ್ ನಡುವೆ ಅಕ್ಷರಶೈಲಿಯ ಬದಲಾವಣೆ (Nudi Kannada-English) – ಸೂಚಕವನ್ನು ಮೊದಲ ಲಾಂಛನದ ಮೇಲೆ ಕ್ಲಿಕ್ ಮಾಡಬೇಕು. ಇದರಿಂದ ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಿಗೆ ಬದಲಿಸಿಕೊಳ್ಳಲು ಸುಲಭವಾಗುತ್ತದೆ.

ಉದಾಹರಣೆಗೆ ಒಂದು ಶೀಟ್‌ನಲ್ಲಿರುವ ಎಲ್ಲಾ ಸೆಲ್‌ಗಳಲ್ಲೂ ಕನ್ನಡ ಅಕ್ಷರಗಳು ಮೂಡಬೇಕಾದಲ್ಲಿ ಎಲ್ಲಾ ಸೆಲ್‌ಗಳನ್ನು ಆಯ್ಕೆಮಾಡಿಕೊಂಡು ಮೇಲೆ ಸೂಚಿಸಿದ ಲಾಂಛನದ ಮೇಲೆ ಕ್ಲಿಕ್ ಮಾಡಬೇಕು.

೨. ಹುಡುಕು (Nudi Find) – ಸೂಚಕವನ್ನು ಎರಡನೆಯ ಲಾಂಛನದ ಮೇಲೆ ಕ್ಲಿಕ್ ಮಾಡಬೇಕು. ಕನ್ನಡ ಪದಗಳನ್ನು ಪಠ್ಯದಲ್ಲಿ ಸುಲಭವಾಗಿ ಮತ್ತು ವೇಗವಾಗಿ ಹುಡುಕಲು ಈ ಸೌಲಭ್ಯವನ್ನು ಬಳಸಿಕೊಳ್ಳಬಹುದು.

೩. ಹುಡುಕು–ಬದಲಿಸು (Nudi Replace) – ಸೂಚಕವನ್ನು ಮೂರನೆಯ ಲಾಂಛನದ ಮೇಲೆ ಕ್ಲಿಕ್ ಮಾಡಬೇಕು. ಕನ್ನಡ ಪದಗಳನ್ನು ಪಠ್ಯದಲ್ಲಿ ಸುಲಭವಾಗಿ ಮತ್ತು ವೇಗವಾಗಿ ಹುಡುಕಲು ಮತ್ತು ಬದಲಿಸಲು ಈ ಸೌಲಭ್ಯವನ್ನು ಬಳಸಿಕೊಳ್ಳಬಹುದು.

೪ ಅಕಾರಾದಿ ವಿಂಗಡಣೆ (Nudi Sort) – ಎಕ್ಸೆಲ್‌ನಲ್ಲಿ ಸಿದ್ಧಪಡಿಸಿದ ಮಾಹಿತಿಯನ್ನು ಕನ್ನಡ ಅಕಾರಾದಿ ವಿಂಗಡಣೆ ಮಾಡಿಕೊಳ್ಳಲು ಈ ಸೌಲಭ್ಯವನ್ನು ಬಳಸಿಕೊಳ್ಳಬಹುದು.

ಬಳಸುವ ವಿಧಾನ:



ಮೇಲಿನ ತೆರೆಯಲ್ಲಿ ಸೂಚಿಸಿರುವಂತೆ ನೀವು ಅಕಾರಾದಿ ವಿಂಗಡಣೆ ಮಾಡಬೇಕೆಂದಿರುವ ಕಾಲಂಗಳಲ್ಲಿರುವ ಮಾಹಿತಿಗಳನ್ನು ಆಯ್ಕೆಮಾಡಿ.




ಯಾವ ಕಾಲಂಅನ್ನು ಆಧಾರವಾಗಿಟ್ಟುಕೊಂಡು ವಿಂಗಡಣೆಮಾಡಬೇಕೋ ಆ ಕಾಲಂ ಅನ್ನು ವಿಂಗಡಣೆ ಕಾಲಂನಲ್ಲಿರುವ ಆಯ್ಕೆಯಲ್ಲಿ ಸೂಚಿಸಿ. ಅರೋಹಣ ಅಥವಾ ಅವರೋಹಣವಾಗಿ ವಿಂಗಡಿಸಬೇಕೋ ಎಂಬುದನ್ನು ಮತ್ತು ವಿಂಗಡಣೆ ಕಾಲಂನಲ್ಲಿ ತಲೆಬರಹ ಇದೆ(Header Row) ಅಥವಾ ತಲೆಬರಹ ಇಲ್ಲ(No HeaderRow) ಎಂಬುದನ್ನೂ ಸೂಚಿಸಿ 'ವಿಂಗಡಣೆ' ಆಯ್ಕೆಯನ್ನು ಮಾಡಿ.

**ಕಾರ್ಯನಿರತನಿಗೆ ಕೆಲಸವೇ ವಿಶ್ರಾಂತಿ, ಸೋಮಾರಿಗೆ ಸುಮ್ಮನೆ ಕುಳಿತಿರುವುದೇ ಕೆಲಸ:– ಸ್ವಾಮಿ ವಿವೇಕಾನಂದ**